**ದಿನಾಂಕಃ 18-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಎಸ್.ಎಸ್.ಜೆ., ವಾದಿಯರ ಪರ ವಕೀಲರಿಂದಃ**

ಸದರಿ ಪ್ರಕರಣದಲ್ಲಿ ನಾನು ವಾದಿಯಾಗಿದ್ದು, ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ ಹಾಗೂ ಸದರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನವೇ ಆಗಿರುತ್ತವೆ.

ನನ್ನ ದಾವೆಗೆ ಪೂರಕವಾಗಿ

1) ದಿನಾಂಕಃ 21-06-2019 ರ ಖರೀದಿ ಒಪ್ಪಂದ ಕರಾರು ಪತ್ರದ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-1 ಅಂತಾ ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಅಂತಾ ಹಾಗೂ ಪ್ರತಿವಾದಿಯ ನಂ.1 ಇವಳ ಸಹಿಯನ್ನು ಪ್ರತಿವಾದಿ ಪರ ವಕೀಲರ ತಕರಾರರಿಗೆ ಒಳಪಟ್ಟು ನಿಪಿ-1(ಬಿ) ಅಂತಾ ಗುರುತಿಸಲಾಯಿತು. (ವಾದಿಯು ಸದರಿ ದಾಖಲೆಯ ಮೇಲೆ ನೋಂದಣಿ ಅಧಿಕಾರಿ ಇವರ ಬಳಿ ಸೂಕ್ತ ದಂಡವನ್ನು ಪಾವತಿ ಮಾಡಿರುತ್ತಾರೆ)
2) ಸರ್ವೆ ನಂಬರ 183ಅ/ಪ್ಲಾ ನಂ. 10 ಇದರ 2020-2021 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-2 ಅಂತಾ ಗುರುತಿಸಲಾಯಿತು.
3) ವಕೀಲರ ಮೂಲಕ ನೀಡಿದ ನೋಟಿಸನ ಕಛೇರಿ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-3 ಅಂತಾ ಗುರುತಿಸಲಾಯಿತು.
4) ಒಂದು ಅಂಚೆ ರಸೀದಿಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-4 ಅಂತಾ ಗುರುತಿಸಲಾಯಿತು.
5) ಒಂದು ಅಂಚೆ ಸ್ವೀಕೃತಿ ಪತ್ರವನ್ನು ಹಾಜರಪಡಿಸಿದ್ದು ಅದನ್ನು ನಿಪಿ-5 ಅಂತಾ ಗುರುತಿಸಲಾಯಿತು.

6) ಪ್ರತಿವಾದಿ ನೀಡಿದ ನೋಟಿಸನ ಉತ್ತರವನ್ನು ಹಾಜರಪಡಿಸಿದ್ದು ಅದನ್ನು ನಿಪಿ-6 ಅಂತಾ ಗುರುತಿಸಲಾಯಿತು.

7) ಜಿ ಆ್ಯಂಡ್ ಡಬ್ಲ್ಯುಸಿ ನಂ. 33/2019 ರಲ್ಲಿಯ ಆದೇಶದ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-7 ಅಂತಾ ಗುರುತಿಸಲಾಯಿತು.

ಕಾರಣ ದಾವೆಯಲ್ಲಿ ಕೋರಿದಂತೆ ಡಿಕ್ರಿಯಾಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಶ್ರೀ ಎಂ.ಜಿ.ಎನ್., ಪ್ರತಿವಾದಿಯರ ಪರ ವಕೀಲರಿಂದಃ**

ಪ್ರತಿವಾದಿ ಪರ ಶ್ರೀ ಎ.ಎಂ.ಬಿ., ವಕೀಲರು ಹಾಜರಿದ್ದು, ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ- **18-07-2024**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.